ಪಿ ಡಬ್ಲ್ಯೂ: 2

ದಿನಾಂಕ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು ಡಿಗ್ರಿ ಪದವೀಧರನಾಗಿರುತ್ತೇನೆ. ನಾನು ಯರೇಕುಪ್ಪಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಈ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿರುತ್ತಾರೆ ಹಾಗೂ ದಾವೆ ಕಾರಣಗಳ ಬಗ್ಗೆ ಮಾಹಿತಿ ಇರುತ್ತದೆ. ಈ ದಾವೆಯನ್ನು ರಾಘವೇಂದ್ರ ಅವರು ತಮ್ಮ ಆಸ್ತಿ ತಮಗೆ ಬೇಕು ಎಂದು ಮಂಜುನಾಥ ವಿರುದ್ಧ ಹೂಡಿರುತ್ತಾರೆ. ದಾವಾ ಆಸ್ತಿಯ ಸರ್ವೆ ನಂ.50 ಅ/1 ಕ ಆಗಿರುತ್ತದೆ. ದಾವಾ ಆಸ್ತಿಯು ಮೂಲತಃ ಸರ್ಕಾರಿ ಆಸ್ತಿಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ಲಾಟ್ ಗಳು ಆಗಿರುತ್ತವೆ ಎಂದರೆ ಸರಿ. ಒಟ್ಟು ಎಷ್ಟು ಪ್ಲಾಟ್ ಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಯಾವ ವರ್ಷ ಪ್ಲಾಟ್ ಗಳನ್ನು ಮಾಡಿ ಯಾರಿಗೆ ಹಂಚಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ.

2. ವಾದಿಯ ಪೂರ್ವದಲ್ಲಿ ದಾವಾ ಆಸ್ತಿಯು ಆತನ ತಂದೆಯ ಹೆಸರಿನಲ್ಲಿತ್ತು. ದಾವಾ ಆಸ್ತಿಯು ಸರ್ಕಾರದಿಂದ ವಾದಿಯ ಅಜ್ಜನಿಗೆ ಮಂಜೂರಾಗಿರುತ್ತದೆ. ವಾದಿಯ ಅಜ್ಜ ಗ್ರಾಮ ಪಂಚಾಯತಿ ಪ್ರಧಾನರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಅಜ್ಜನ ಹೆಸರಿನಲ್ಲಿ ಒಟ್ಟು ಎಷ್ಟು ಪ್ಲಾಟ್ ಗಳಿದ್ದವು ಎಂದು ನನಗೆ ಗೊತ್ತಿಲ್ಲ. ವಾದಿಯ ಅಜ್ಜನ ಹೆಸರು ಈಗ ನೆನಪಿಲ್ಲ. ವಾದಿಯ ಅಜ್ಜ ಪ್ಲಾಟ್ ನಂ.1, 63 ಮತ್ತು 64 ನ್ನು ತಮ್ಮ ಹೆಸರಿಗೆ ಮಂಜೂರು ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತಾರವನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಯಲ್ಲಿ 4 ಗುಂಟೆ 1 ಆಣೆ ವಿಸ್ತೀರ್ಣ ತೋರಿಸಿರುತ್ತಾರೆ. ವಾದಿಯ ಅಜ್ಜನಿಗೆ 3 ಗುಂಟೆ ಆಸ್ತಿ ಮಾತ್ರ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ.

3. ಕೆಜೆಪಿ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಪಂಚಾಯತಿಯವರು ನೀಡಿದ ಪಟ್ಟಾ ದಾಖಲೆಗಳಂತೆ ಮಂಜೂರಾತಿ ಪಡೆದ ಸ್ಥಳಗಳಲ್ಲಿ ಮಂಜೂರುದಾರರು ವಾಸಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ಬಿನ್ ಶೇತ್ಕಿ ಪ್ಲಾಟ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೂಲ ಸರ್ವೆ ನಂಬರ್ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸಾಕ್ಷಿಗೆ ದಾವಾ ಪ್ಲಾಟ್ ನ ಮೂಲ ಸರ್ವೆ ನಂಬರ್ ನಲ್ಲಿರುವ ಬೇರೆ ಪ್ಲಾಟ್ ಗಳ ಬಗ್ಗೆ ಪ್ರಶ್ನೆ ಕೇಳಿದ್ದು ಸದರಿ ಪ್ರಶ್ನೆಯು ಸಾಕ್ಷಿಯ ಮುಖ್ಯ ವಿಚಾರಣೆಗೆ ಸುಸಂಬದ್ಧವಿಲ್ಲ ಎಂದು ತಳ್ಳಿಹಾಕಲಾಯಿತು. ವಾದಿ ಮತ್ತು ಪ್ರತಿವಾದಿಗಳ ಸರ್ವೆ ನಂಬರ್ ಬೇರೆ ಬೇರೆ ಎದ್ದರೆ ಸಾಕ್ಷಿಯು ಪ್ರತಿವಾದಿಗಳ ಸರ್ವೆ

ನಂಬರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ತಂಗಿ ಪ್ರೇಮಾ ವಾಸವಾಗಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಪ್ರತಿವಾದಿಗಳು ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಪ್ರತಿವಾದಿಗಳಿಗೆ ವಿದ್ಯುತ್ ಸಂಪರ್ಕ ಮತ್ತು ಪಟ್ಟಾ ದಾಖಲೆ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿಗಳು ಎಂದಿಗೂ ಹರಕತ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಮನೆಯ ಪಶ್ಚಿಮಕ್ಕೆ ಇರುವುದು ಸರ್ಕಾರಿ ಪಡ ಸರ್ವೆ ನಂ.59 ಆಗಿರುತ್ತದೆ ಎಂದರೆ ಸಾಕ್ಷಿಯು ರಸ್ತೆಯವರೆಗೂ ವಾದಿಯ ಜಾಗ ಇರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ರಸ್ತೆ ಇರುವ ಕುರಿತು ದಾಖಲೆಗಳನ್ನು ನಾನು ನೋಡಿರುವುದಿಲ್ಲ.

5. ವಾದಿಯ ಮನೆಯ ಪಶ್ಚಿಮಕ್ಕೆ ಪ್ರತಿವಾದಿಯ ಮನೆ ಇದ್ದು ನಂತರ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ರಸ್ತೆಯ ನಂತರ ಮಲ್ಲಮ್ಮ ದೇವಸ್ಥಾನ ಇದೆ ಎಂದರೆ ಸರಿ. ಸದರಿ ರಸ್ತೆಯು ಜೋಯಿಸರಹರಳಹಳ್ಳಿಯಿಂದ ಯರೇಕುಪ್ಪಿ ರಾಣೇಬೆನ್ನೂರು ರಸ್ತೆ ಸೇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ ಯಾವುದೇ ರಸ್ತೆ ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಆಸ್ತಿ ಕಬಳಿಸುವ ಉದ್ದೇಶದಿಂದ ವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ಪ್ರತಿವಾದಿಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಾದಿಯು ಸುಳ್ಳು ಮಾಹಿತಿಯನ್ನು ನೀಡಿ ರಸ್ತೆಯವರೆಗ ತನ್ನ ಆಸ್ತಿ ಎಂದು ಸುಳ್ಳು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.